ಆ) ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿ ಇಲಾಖೆಯಿಂದ ಇಲಾಖಾ ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ ನಿಯಮಗಳ ಪ್ರಕಾರ ಟೆಂಡರು ಕರೆದು ಕಾಮಗಾರಿಗಳನ್ನು ಮಾಡಿಸಲಾಗಿದೆ ಮತ್ತು ಪ್ರಾಧಿಕಾರದಿಂದ ಅವರಿಗೆ ದತ್ತವಾಗಿರುವ ಅಧಿಕಾರದ ರೀತ್ಯಾ ಅನುಮೋದನೆ ಪಡೆದು ಕಾಮಗಾರಿಗಳನ್ನು ನಿರ್ವಹಿಸಲಾಗಿದೆ. ಅಗತ್ಯವಿದ್ದ ಕಡೆ ಸರ್ಕಾರದ ಅನುಮೋದನೆ ಪಡೆಯಲಾಗಿದೆ.

ಇ) ಕೆಲಸಗಳನ್ನು ನಿಯಮಾನುಸಾರ ಅನುಷ್ಠಾನಗೊಳಿಸಲಾಗಿದೆ.

ಈ) ಮಾನ್ಯ ಲೋಕಾಯುಕ್ತರು ದಿನಾಂಕ: 08–05–2003 ರಂದು ರಾಷ್ಟ್ರೀಯ ಉದ್ಯಾನವನಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಕಛೇರಿಯಲ್ಲಿ ಸಂಬಂಧಪಟ್ಟ ಹಲವು ಕಡತಗಳನ್ನು ವಶಪಡಿಸಿ ಕೊಂಡಿರುವುದರಿಂದ ವಿವರಗಳನ್ನು ನೀಡಲು ಸದ್ಯದಲ್ಲಿ ಸಾಧ್ಯವಾಗುವುದಿಲ್ಲ.

ರಾಜ್ಯದಿಂದ ಕೇಂದ್ರಕ್ಕೆ ಸಿ.ಆರ್.ಎಫ್ ಹಣ ಬಿಡುಗಡೆ

4337(4988) ಶ್ರೀ ನಾರಾಯಣಸ್ವಾಮಿ ಎ. (ಆನೇಕಲ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯಕ್ಕೆ ಕೇಂದ್ರದಿಂದ ಸಿ.ಆರ್.ಎಫ್. ಯೋಜನೆಯಲ್ಲಿ ಬಿಡುಗಡೆಯಾಗಿರುವ ಒಟ್ಟು ಮೊತ್ತವೆಷ್ಟು ; (ಕಳೆದ ಮೂರು ವರ್ಷಗಳ ಜಿಲ್ಲಾ ಮತ್ತು ತಾಲ್ಲೂಕುವಾರು ವಿವರಗಳನ್ನು ನೀಡುವುದು);

ಆ) ಕೇಂದ್ರದಿಂದ ರಾಜ್ಯಕ್ಕೆ ನೀಡುವ ಸಿ.ಆರ್.ಎಫ್. ಯೋಜನೆಯಲ್ಲಿ ತಾರತಮ್ಯವಿರುವುದು ನಿಜವೇ ; ಹಾಗಿದ್ದಲ್ಲಿ, ತಾರತಮ್ಯವನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

ಇ) ಆನೇಕಲ್ ಕ್ಷೇತ್ರಕ್ಕೆ ಸಿ.ಆರ್.ಎಫ್. ಯೋಜನೆಯಲ್ಲಿ ಎರಡು ಕೋಟಿ ರೂ.ಗಳನ್ನು ಬಿಡುಗಡೆಗೊಳಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಕಳೆದ ಮೂರು ವರ್ಷಗಳಲ್ಲಿ ಕೇಂದ್ರ ರಸ್ತೆ ನಿಧಿ ಯೋಜನೆಯಡಿ ಒಟ್ಟು 198 ಕಾಮಗಾರಿಗಳು 164.00 ಕೋಟಿ ರೂ.ಗಳ ಮೊತ್ತಕ್ಕೆ ಮಂಜೂರಾಗಿರುತ್ತದೆ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ) ಕೇಂದ್ರದಿಂದ ರಾಜ್ಯದ ಪಾಲಿಗೆ ಬರಬೇಕಾದ ಮೊತ್ತವನ್ನು (Accruals) ಲಭ್ಯತೆಗೆ ಅನುಗುಣವಾಗಿ, ವಿನಿಯೋಗಿತ ಪ್ರಮಾಣ ಪತ್ರ ಸಲ್ಲಿಸಿದಂತೆ ಬಿಡುಗಡೆ ಮಾಡಲಾಗುತ್ತದೆ. ಇದರಲ್ಲಿ ಯಾವುದೇ ತಾರತಮ್ಯ ಇರುವುದಿಲ್ಲ.

ಇ) ಈ ಸಾಲಿನ ಕೇಂದ್ರ ರಸ್ತೆ ನಿಧಿ ಯೋಜನೆಯ ಕಾರ್ಯಕ್ರಮದ ರೂಪರೇಷೆಯ ನಂತರ ಕ್ರಮ ಕೈಗೊಳ್ಳಲಾಗುವುದು.

ಅನುಬಂಧ

Abstract for Districtwise details of 198 approved CRF works

Sl. No.	District	No.of works	Length of Road proposed for improvement	Sanctioned Estimated cost (Rs.in Lakhs)
1	Bagalkot	7	71.50	597.37
2	Bangalore (Rural)	8	100.45	857.50

3	Belgaum	16	146.91	1499.55
4	Bidar	15	114.95	1092.97
5	Bijapur	6	32.40	404.00
6	Chamarajnagar	5	35.15	271.00
7	Chickmagalore	9	66.00	511.00
8	Chitradurga	5	51.64	302.00
9	Dakshina Kannada	8	107.05	809.10
10	Davangere	5	49.00	380.00
11	Dharwad	8	50.99	561.87
12	Gadag	4	38.10	300.00
13	Gulbarga	18	138.60	1333.16
14	Hassan	14	118.36	1006.73
15	Haveri	5	40.15	280.00
16	Kodagu	2	15.90	115.00
17	Kolar	6	35.28	278.61
18	Koppal	4	19.70	210.00
19	Mandya	16	143.21	1797.00
20	Mysore	4	37.81	260.00
21	Raichur	6	33.70	298.99
22	Shimoga	7	93.93	460.80
23	Tumkur	9	164.50	2091.59
24	Udupi	8	69.40	572.20
25	Uttara Kannada	3	20.70	118.00
	Total	**198**	**1795.37**	**16408.44**

ಚಿಕ್ಕಮಗಳೂರು ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ರಸ್ತೆ ಅಭಿವೃದ್ಧಿಗೆ ಬಿಡುಗಡೆಯಾದ ಹಣ

4338(3934) ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ 2000-01, 2001-02 ರ ಸಾಲಿನಲ್ಲಿ ನಿರ್ವಹಣೆಗೆ ಬಿಡುಗಡೆಯಾದ ಹಣ ಎಷ್ಟು ; (ತಾಲ್ಲೂಕುವಾರು ನೀಡುವುದು) ;

ಆ) ಇದರಲ್ಲಿ, ರಸ್ತೆ ದುರಸ್ತಿಗೆ ಬಿಡುಗಡೆಯಾದ ಹಣವೆಷ್ಟು ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಲೋಕೋಪಯೋಗಿ ಇಲಾಖೆ ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು ವಲಯದ ವ್ಯಾಪ್ತಿಯಲ್ಲಿ ಬರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಚಿಕ್ಕಮಗಳೂರು ಜಿಲ್ಲೆಯಲ್ಲಿ